**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ,**

**ಹೊನ್ನಾವರ**

**ಫೌಜುದಾರಿ ಪ್ರಕರಣ ಸಂಖ್ಯೆ : 54/2023**

**ಚಾ.ಸಾಃ 9, ಫ್ರಾ.ಸಾಃ 03**

| | |
|---|---|
| ಸಾಕ್ಷಿದಾರನ ಹೆಸರು | ಮಂಜುನಾಥ ಎಸ್. |
| ತಂದೆಯ ಹೆಸರು | ಹಾಲಪ್ಪ ಎಸ್. |
| ವಯಸ್ಸು | 55 ವರ್ಷಗಳು |
| ಉದ್ಯೋಗ | ಪಿಡಬ್ಲುಡಿ ಕಾಂಟ್ರಾಕ್ಟ, |
| ವಾಸ್ತವ್ಯ | ಸೊರಬ ರಸ್ತೆ, ಸಾಗರ ಟೌನ್ ಶಿವಮೊಗ್ಗ ಜಿಲ್ಲೆ |

**ಸಾಕ್ಷಿಯನ್ನು ದಿನಾಂಕಃ 07-11-2024 ರಂದು ಕರೆಸಿ ಪ್ರಮಾಣೀಕರಿಸಲಾಯಿತು.**

**ಮುಖ್ಯ ವಿಚಾರಣೆಃ ಎಪಿಪಿಯವರಿಂದ,**

ನಾನು ಕೆಎ-15/ವಾಯ್-2465 ಬೈಕಿನ ಮಾಲೀಕನು.

ದಿನಾಂಕ 03-03-2023 ರಂದು ನಮ್ಮ ಊರಿನಲ್ಲಿ ಜಾತ್ರೆ ಮುಗಿದ ನಂತರ ನಮ್ಮ ಮನೆಗೆ ಬಂದ ಸುಬಂಧಿಕರನ್ನು ಟ್ರೇನಿಗೆ ಕಳುಹಿಸಲು ರಾತ್ರಿ 09-30 ರ ವೇಳೆಗೆ ನಾನು ನನ್ನ ಬೈಕನಲ್ಲಿ ಸಾಗರ ರೈಲ್ವೆ ಸ್ಟೇಶನ್ ಹತ್ತಿರ ಹೋಗಿ ಬೈಕನ್ನು ರೈಲ್ವೆ ಸ್ಟೇಶನ್‌ನಿಂದ ಸ್ವಲ್ಪ ದೂರದಲ್ಲಿ ನಿಲ್ಲಿಸಿ ಸಂಬಂಧಿಕರನ್ನು ಬಿಡಲು ರೈಲ್ವೆಸ್ಟೇಶನ್ ಒಳಗೆ ಹೋಗಿದ್ದು ನಂತರ ಅವರನ್ನು ರೈಲಿಗೆ ಹತ್ತಿಸಿ ವಾಪಸ್ಸು ಬಂದು ನೋಡಿದಾಗ ನಾನು ನಿಲ್ಲಿಸಿದ ಬೈಕ್ ಅಲ್ಲಿ ಇರಲಿಲ್ಲ. ಅದು ಕಳ್ಳತನ ಆಗಿತ್ತು. ಬೈಕು ಕಳ್ಳತನ ಆದ ಬಗ್ಗೆ ಸಾಗರ ಪೋಲೀಸ್ ಠಾಣೆಗೆ ಹೋಗಿ ದೂರು ನೀಡಿರುತ್ತೇನೆ.

ದಿನಾಂಕ 17-03-2023 ರಂದು ಸಾಗರ ಪೋಲೀಸರು ಫೋನ್ ಮಾಡಿ ಕಳುವಾಗಿದ್ದ ನನ್ನ ಬೈಕ್ ಹೊನ್ನಾವರ ಠಾಣೆಯಲ್ಲಿ ಸಿಕ್ಕಿದ್ದು ಬಿಡಿಸಿಕೊಳ್ಳುವಂತೆ ಸೂಚಿಸಿದ್ದರು. ಅದರಂತೆ ನಾನು ದಿನಾಂಕ 18-03-2023 ರಂದು ಹೊನ್ನಾವರ ಪೋಲೀಸ್ ಠಾಣೆಗೆ ಬಂದಾಗ ಠಾಣಾ ಆವರಣದಲ್ಲಿ ಕಳುವಾಗಿದ್ದ ನನ್ನ ಬೈಕು ಇತ್ತು. ಪೋಲೀಸ್ ಠಾಣೆಯಲ್ಲಿ ಒಬ್ಬ ವ್ಯಕ್ತಿ ಇದ್ದು ಪೋಲೀಸರು ಆತನೇ ಬೈಕ್ ಕಳುಮಾಡಿದ್ದ ವ್ಯಕ್ತಿ ಎಂದು ತಿಳಿಸಿರುತ್ತಾರೆ. ನಂತರ ಮಾನ್ಯ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿ ಮಾನ್ಯ ನ್ಯಾಯಾಲಯದ ಆದೇಶದಂತೆ ಬೈಕನ್ನು ನನ್ನ ವಶಕ್ಕೆ ಪಡೆದಿರುತ್ತೇನೆ. ಘಟನೆಯ ಬಗ್ಗೆ ಪೋಲೀಸರಿಗೆ ಹೇಳಿಕೆ ನೀಡಿರುತ್ತೇನೆ. ನನ್ನ ಬೈಕನ್ನು ಮತ್ತು ಠಾಣೆಯಲ್ಲಿದ್ದ ಆಸಾಮಿಯನ್ನು ನೋಡಿದರೆ ಗುರುತಿಸುತ್ತೇನೆ. ಈಗ 2 ಫೋಟೋದಲ್ಲಿರುವ ಬೈಕನ್ನು ಮತ್ತು ನಿಕ್ಕರ್ ಹಾಕಿರುವ ವ್ಯಕ್ತಿಯನ್ನು ನೋಡಿ ಗುರುತಿಸಿರುತ್ತಾರೆ. ಸದರಿ ಫೋಟೋಗಳನ್ನು ನಿಪಿ-5 ಮತ್ತು 6 ಎಂದು ಗುರುತಿಸಲಾಯಿತು. ಆರೋಪಿ ಗೈರು ಹಾಜರು. ಗುರುತಿನ ಬಗ್ಗೆ ತಕರಾರು ಇಲ್ಲ.

**<u>ಪಾಟೀ ಸವಾಲುಃ ಆರೋಪಿ ಪರ ವಕೀಲರಾದ ಶ್ರೀ ಪಿ. ಜಿ.ಟಿಯವರಿಂದಃ</u>**

ಬೈಕ್ ಕಳ್ಳತನವಾದ ದಿನವೇ ದೂರು ನೀಡಿರುತ್ತೇನೆ. ಪೋಲೀಸರು ಸ್ವೀಕೃತಿ ನೀಡಿರುತ್ತಾರೆ. ಅದನ್ನು ಈ ಪ್ರಕರಣದಲ್ಲಿ ಹಾಜರುಪಡಿಸಿಲ್ಲ. ಪೋಲೀಸ್ ಠಾಣೆಯಲ್ಲಿದ್ದ ಆಸಾಮಿಯೇ ಬೈಕ್ ಕಳ್ಳತನ ಮಾಡಿರುವುದಾಗಿ ಪೋಲೀಸರು ತಿಳಿಸಿರುತ್ತಾರೆ. ಪೋಲೀಸ್ ಠಾಣೆಗೆ ಬಂದಾಗ ಬೆಳಿಗ್ಗೆ 11-00 ಗಂಟೆ ಆಗಿತ್ತು. ಆ ದಿನ ಪೋಲೀಸ್ ಠಾಣೆಯಲ್ಲಿ ನನ್ನ ಸಮಕ್ಷಮ ಯಾವುದೇ ಬರವಣಿಗೆ ಮಾಡಿಲ್ಲ. ಆರೋಪಿಯ ವಿಳಾಸವನ್ನು ಹೇಳಿಲ್ಲ. ಹೆಸರನ್ನು ಮಾತ್ರ ಹನುಮಂತ ಎಂದು ಹೇಳಿರುತ್ತಾರೆ. ಆರೋಪಿಯ ವಿಳಾಸವನ್ನು ನಾನು ಪೋಲೀಸರಿಗೆ ಹೇಳಿಲ್ಲ. ನಾನು ಪೋಲೀಸ್ ಠಾಣೆಗೆ ಹೋಗೇ ಇಲ್ಲ, ಅಲ್ಲಿ ಆರೋಪಿ ಇರಲಿಲ್ಲ ಎಂದರೆ ಸರಿಯಲ್ಲ. ಪೋಲೀಸರ ಮಾತುಕೇಳಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇರುವುದಿಲ್ಲ.**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)**

ಓ.ಹೇ.ಕೇ. ಸರಿ ಇದೆ.

**ಸಹಿ ಇದೆ.**

**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾದಂಡಾಧಿಕಾರಿಗಳು, ಹೊನ್ನಾವರ**